# GATWU Garment and Textile Workers Union

## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

Affiliated to New Trade Union initiative (NTUI)

## ಸರ್ಕಾರದ ಮಾಲೀಕರ ಪರ ಧೋರಣೆಯ ವಿರುದ್ಧ , ಗಾರ್ಮೆಂಟ್ಸ್ ಕಾರ್ಮಿಕರೇ ಜಾಗೃತರಾಗಿ..., ಪ್ರತಿಭಟಿಸಲು ಮುಂದಾಗಿ.

ಆತ್ಮೀಯ ಕಾರ್ಮಿಕ ಸಂಗಾತಿಗಳೇ,

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ನ ಎರಡು ವರ್ಷಗಳ ಸತತ ಪ್ರಯತ್ನದ ಫಲವಾಗಿ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠವೇತನ ಪರಿಷ್ಕರಿಸಿ ಹೊರಡಿಸಿದ್ದ ಕರಡು ಆದೇಶವನ್ನು ಮಾಲೀಕವರ್ಗದ ಪ್ರಬಲ ಲಾಬಿಗೆ ಮಣಿದು ಹಿಂಪಡೆಯುವುದರ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರಿಗೆ ಸರ್ಕಾರ ಅಪಾರ ಅನ್ಯಾಯ ಮಾಡಿದೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಸರ್ಕಾರವು ಅನ್ಯಾಯ ಮಾಡುತ್ತಿರುವುದು ಇದೇ ಮೊದಲಲ್ಲ. 1979 ರಿಂದ ಸತತವಾಗಿ ಇಲ್ಲಿಯವರೆಗೂ ಇದೇ ರೀತಿ ಕಾರ್ಮಿಕರ ಕನಿಷ್ಠ ವೇತನದ ಬಗ್ಗೆ ಘೋರ ಅನ್ಯಾಯ ಮಾಡಿಕೊಂಡು ಬಂದಿದೆ. ಈಗ ನಾವುಗಳು ಸರ್ಕಾರದ ವಿರುದ್ಧ ಮತ್ತು ನಮಗೆ ಕನಿಷ್ಠ ವೇತನವನ್ನೂ ಕೊಡಲು ನಿರಾಕರಿಸುತ್ತಿರುವ ಮಾಲೀಕರ ವಿರುದ್ಧ ಸಂಘಟಿತವಾಗಿ ಹೋರಾಡಲೇಬೇಕಿದೆ. ಇಲ್ಲದಿದ್ದರೆ ಹಣವುಳ್ಳ ಅಧಿಕಾರವುಳ್ಳ ಬಂಡವಾಳಶಾಹಿಗಳು ಮತ್ತು ಅವರ ಪರವಾಗಿರುವ ಸರ್ಕಾರಗಳು ನಮ್ಮನ್ನು ತುಳಿದುಹಾಕುತ್ತವೆ.

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಕಳೆದ ಎರಡು ವರ್ಷಗಳಿಂದ ವಿಧಾನಸೌಧ, ವಿಕಾಸಸೌಧ, ಕಾರ್ಮಿಕ ಇಲಾಖೆಯ ಮೆಟ್ಟಿಲುಗಳನ್ನು ಲೆಕ್ಕವಿಲ್ಲದಷ್ಟು ಬಾರಿ ಹತ್ತಿ ಇಳಿದುದರ ಪರಿಣಾಮವಾಗಿ 2018 ರ ಫೆಬ್ರವರಿಯಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠ ವೇತನವನ್ನು ಪರಿಷ್ಕರಿಸಿ ಸರ್ಕಾರವು ಕರಡು ಆದೇಶವನ್ನು ಹೊರಡಿಸಿತ್ತು. (KE 76 LMW 2017 dt 22.02.2018). ಕಾರ್ಮಿಕರಿಗೆ ಕನಿಷ್ಠ ವೇತನವನ್ನು ತಿಂಗಳಿಗೆ ರೂ. 18,000 ನಿಗದಿ ಪಡಿಸಿ ಎಂದು ಕೇಳುತ್ತಿರುವ ಈ ಸಂದರ್ಭದಲ್ಲಿ ಇದು ಅಷ್ಟಿಲ್ಲದಿದ್ದರೂ, ಈಗಿರುವ ವೇತನಕ್ಕಿಂತ ಸ್ವಲ್ಪ ಮಟ್ಟಿಗೆ ಹೆಚ್ಚಾಗಿ ಸಮಾಧಾನವನ್ನು ತಂದಿತ್ತು.

ಸರ್ಕಾರವು ಹಿಂದಕ್ಕೆ ಪಡೆದಿರುವ ಕರಡು ಆದೇಶದಲ್ಲಿ ನಿಗದಿಯಾಗಿದ್ದ ವೇತನ ದರಗಳು (ಡಿ.ಎ ಹೊರತು ಪಡಿಸಿ).

| ವಲಯಗಳು | High skill (*"A++ tailor, Marker & Cutter)* | Skilled *Tailor 'A', Cutter, Checker* | Semi skilled Tailor'B', K/B, Over lock operator, Ironer, M/Checker | Un skilled Tailor 'C", Packer, Layer, Trimmer, |
|---|---|---|---|---|
| Zone -1 , ಬೆಂಗಳೂರು | 15423.40 | 14021-27 | 12746-61 | 11587-83 |
| Zone - 2 ಮೈಸೂರು, ತುಮಕೂರು ಶಿವಮೊಗ್ಗ, ಹು. ಧಾ | 14688.95 | 13353-59 | 12139-63 | 11036-03 |
| Zone - 3 ಇತರ ಜಿಲ್ಲಾ ಕೇಂದ್ರಗಳು | 13989-48 | 12717-71 | 11561-55 | 10510-50 |
| Zone - 4 ಎಲ್ಲ ತಾಲ್ಲೂಕು ಮತ್ತು ಪಂಚಾಯತಿ ಕೇಂದ್ರಗಳು | 13323-31 | 12112-10 | 11011-00 | 10010-00 |

Scanned with OKEN Scanner

ಆದರೆ, ಜನಪರವಾಗಿ ಕೆಲಸ ಮಾಡಬೇಕಿದ್ದ ಸರ್ಕಾರವು, ಲಾಭಕೋರ ಆಡಳಿತವರ್ಗಗಳ ಪ್ರಬಲ ಲಾಬಿಗೆ ಮಣಿದು, ದಿನಾಂಕ 23.03.2018 ರಂದು ತನ್ನ ಕರಡು ಆದೇಶವನ್ನು ಹಿಂಪಡೆದುಕೊಂಡಿದೆ, ಈ ಮೂಲಕ 4 ಲಕ್ಷ ಗಾರ್ಮೆಂಟ್ಸ್ ಕಾರ್ಮಿಕರಿಗೆ ಸರ್ಕಾರ ದ್ರೋಹ ಬಗೆದಿದೆ.

ಈಗಿರುವ ಗಾರ್ಮೆಂಟ್ಸ್ ಉದ್ಯಮವು ಕೇವಲ ಸಿದ್ಧಉಡುಪು ಉದ್ಯಮ ಮಾತ್ರವಾಗಿದೆ ಮತ್ತು ಇದರಲ್ಲಿ ಸುಮಾರು 3.5 ಇಂದ 4 ಲಕ್ಷ ಕಾರ್ಮಿಕರು ಪ್ರತ್ಯಕ್ಷವಾಗಿ ದುಡಿಯುತ್ತಿದ್ದಾರೆ. ಆದರೆ ಇದಕ್ಕೆ ಯಾವುದೇ ರೀತಿಯಲ್ಲೂ ಸಂಬಂಧಿಸದ ಬಟ್ಟೆ ಡೈಯಿಂಗ್ ಉದ್ಯಮ, ಸ್ಪಿನ್ನಿಂಗ್ ಮಿಲ್ ಉದ್ಯಮ ಮತ್ತು ಟೆಕ್ಸ್ಟೈಲ್ ಉದ್ಯಮಗಳನ್ನು ಇದಕ್ಕೆ ತಳಕು ಹಾಕುತ್ತಾ, ಇದೆಲ್ಲದಕ್ಕೂ ಒಂದೇ ಕನಿಷ್ಠ ವೇತನವನ್ನು ನಿಗದಿಪಡಿಸುತ್ತೇವೆ ಎಂದು ಸಬೂಬು ಹೇಳುತ್ತಿದೆ. ಈ ಮೂಲಕ ಕನಿಷ್ಠ ವೇತನ ನಿಗದಿಗೆ ಕಾಲಹರಣ ಮಾಡಲು ಹೊಸ ಹೊಸ ನೆಪಗಳನ್ನು ಹುಡುಕುತ್ತಿದೆ.

ಕಾರ್ಮಿಕರೇ ಇಲ್ಲಿ ಗಮನಿಸಿ, ನಮ್ಮ ಕನಿಷ್ಠ ವೇತನ ನಿಗದಿ ಮಾಡುವುದನ್ನು ಕೇವಲ ಒಂದು ತಿಂಗಳು ಮುಂದೂಡಿದರೂ, ಮಾಲೀಕರಿಗೆ ಅಂದಾಜು ಸುಮಾರು ರೂ.160 ಕೋಟಿ ಉಳಿತಾಯವಾಗುತ್ತದೆ. ತಿಂಗಳಿಗೆ ಇಷ್ಟು ಹಣ ಉಳಿತಾಯವಾಗುವಾಗ ಲಾಭಕೋರ ಆಡಳಿತವರ್ಗಗಳು ವಿನಾಕಾರಣ ಕಾಲಹರಣ ಮಾಡಲು ನ್ಯಾಯಾಲಯಗಳನ್ನು ಸಂಪರ್ಕಿಸುತ್ತವೆ, ಸರ್ಕಾರದೊಂದಿಗೆ ಪ್ರಬಲ ಲಾಬಿಯನ್ನೂ ನಡೆಸುತ್ತವೆ. **ಆದರೆ ಸಮಾಜಮುಖಿಯಾಗಿ, ಬಹುಸಂಖ್ಯಾತ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಬೇಕಾದ ಸರ್ಕಾರವು ಈ ಕೆಲವೇ ಆಡಳಿತವರ್ಗದ ಲಾಬಿಗೆ ಮಣಿದು, ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು, ಈ ರೀತಿ ತಾನೇ ಹೊರಡಿಸಿದ ಆದೇಶಗಳನ್ನು ಹಿಂಪಡೆಯುತ್ತಾ ಕಾರ್ಮಿಕರಿಗೆ ಘೋರ ಅನ್ಯಾಯ ಮಾಡುತ್ತಿದೆ.**

ಆಡಳಿತವರ್ಗದ ಲಾಬಿಗೆ ಮಣಿದು ಗಾರ್ಮೆಂಟ್ಸ್ ಕಾರ್ಮಿಕರಿಗೆ ಸರ್ಕಾರವು ದ್ರೋಹ ಮಾಡುತ್ತಿರುವುದು ಇದೇ ಮೊದಲ ಬಾರಿಯಲ್ಲ. 2001, 2010 ರಲ್ಲಿಯೂ ಇದೇ ರೀತಿ ಕ್ಷುಲ್ಲಕ ಕಾರಣಗಳನ್ನು ನೀಡಿ ಅಂತಿಮ ಆದೇಶಗಳನ್ನೇ ಹಿಂಪಡೆದಿರುವ ಉದಾಹರಣೆಗಳು ನಮ್ಮ ಮುಂದೆ ಇದೆ. ಕಾರ್ಮಿಕರ ಮತಗಳಿಂದ ಆರಿಸಿ ಬಂದ ಸರ್ಕಾರಗಳು ಕಾರ್ಮಿಕರನ್ನೇ ನಿರ್ಲಕ್ಷ್ಯ ಮಾಡಿವೆ.

ಆದ್ದರಿಂದ ಕಾರ್ಮಿಕರೇ, ನಾವು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ, ಪ್ರತಿಭಟಿಸದಿದ್ದರೆ ಆಡಳಿತವರ್ಗದೊಂದಿಗೆ ಸರ್ಕಾರವೂ ಶಾಮೀಲಾಗಿ ನಮ್ಮನ್ನು ಶೋಷಿಸುತ್ತವೆ.

2018ರ ವಿಧಾನಸಭಾ ಚುನಾವಣೆ ಹತ್ತಿರದಲ್ಲಿಯೇ ಇದೆ. ಆದ್ದರಿಂದ ಕಾರ್ಮಿಕರೇ,. ನಿಮ್ಮ ಮತ ಕೇಳಲು ಬರುವ ಅಭ್ಯರ್ಥಿಗಳೊಂದಿಗೆ, ನಮಗಾಗಿರುವ ಅನ್ಯಾಯದ ಬಗ್ಗೆ ಪ್ರಶ್ನಿಸಲೇ ಬೇಕು ಮತ್ತು ಮುಂದೆ ಕಾರ್ಮಿಕರ ಹಿತಾಸಕ್ತಿಯನ್ನು ಕಾಯುವಂತಹ ಸರ್ಕಾರವನ್ನು ನಾವು ಆರಿಸಬೇಕಿದೆ.

**ಪ್ರಶ್ನಿಸಿ. . . . ಯೋಚಿಸಿ. . . . ನಿರ್ಣಯಿಸಿ.**

---

*ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:*

**ಗಾರ್ಮೆಂಟ್ ಅಂಡ್ ಟೆಕ್ಸ್ಟೈಲ್ ವರ್ಕರ್ಸ್ ಯೂನಿಯನ್ (GATWU)**

ನಂ. 17/1, ಮೊದಲನೇ ಮಹಡಿ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560 026

ಮೊ: 9945027599, 9066166138, 8073955424, 9901290495

---

**Supported by**

SIEDS Bengaluru

Scanned with OKEN Scanner